ಇ) *ಯೋಜನೆಯು ಯಾವಾಗ ಮುಗಿಯುತ್ತದೆ?*

ಈ) *ಕರ್ನಾಟಕ ಸರಕಾರದ ಈಗಿನವರೆಗಿನ ನೀಡಿರುವ ಹಣವೆಷ್ಟು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಕರ್ನಾಟಕದಲ್ಲಿ ಉಪಯೋಗಿಸುವ ನೀರಿನ ಪಾಲು 4 ಟಿ.ಎಂ.ಸಿ.

ಇ) ಈ ಯೋಜನೆಯನ್ನು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುವ ಉದ್ದೇಶವಿದೆ.

ಈ) ಈಗಿನ ಅಂದಾಜಿನ ಪ್ರಕಾರ ಈ ಯೋಜನೆಗೆ ತಗಲುವ ವೆಚ್ಚದಲ್ಲಿ ಕರ್ನಾಟಕದ ಪಾಲು ರೂ.26.00 ಕೋಟಿ. ಇದುವರೆವಿಗೆ 4.07 ಕೋಟಿ ರೂ.ಗಳನ್ನು ಮಹಾರಾಷ್ಟ್ರ ಸರಕಾರಕ್ಕೆ ಪಾವತಿ ಮಾಡಲಾಗಿದೆ.

ಕುಲದೀಪ್‌ಸಿಂಗ್ ಆಯೋಗದ ಬಗ್ಗೆ

1094 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರವು ಕುಲ್‌ದೀಪ್‌ಸಿಂಗ್ ಆಯೋಗದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳಿಸಲಾಗಿದೆಯೇ?*

ಆ) *ಹಾಗಿದ್ದರೆ, ಯಾವಾಗ ಮತ್ತು ಯಾವ ನಿರ್ದೇಶನದ ಮೇರೆಗೆ?*

ಇ) *ಆಯೋಗದ ಶಿಫಾರಸ್ಸು ಮತ್ತು ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಸರ್ಕಾರ ಕೈಗೊಂಡ ಕ್ರಮ ಏನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ದಿನಾಂಕ 10.1.1991ರಂದು ಸೂಕ್ತ ಕ್ರಮ ತೆಗೆದುಕೊಳ್ಳಲು ಕಳಿಸಲಾಗಿದೆ.

ಇ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ಕಾಗದದ ಕಾರ್ಖಾನೆ

189 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಕಾಗದದ ಕಾರ್ಖಾನೆಯಲ್ಲಿ ಸುಟ್ಟ ಸುಣ್ಣವನ್ನು ಹೊರಗಿನ ಸರಬರಾಜುದಾರರಿಂದ ಕೊಂಡುಕೊಳ್ಳಲು ಟೆಂಡರುಗಳನ್ನು ಕರೆಯುವ ಕಾರ್ಯಕ್ರಮವಿದೆಯೆ? ಹಾಗಿದ್ದಲ್ಲಿ, ಎಷ್ಟು ಟೆಂಡರುಗಳು ಬಂದಿವೆ ವಿವರಗಳನ್ನು ಕೊಡುವುದು.*

ಆ) *ವಿವಿಧ ಜಾತಿಯ ಸುಣ್ಣಕ್ಕೆ ಹಣವನ್ನು ಪಾವತಿ ಮಾಡುವ ಕರಾರುಗಳು ಬಂದಿವೆಯೇ? (ವಿವರ ನೀಡುವುದು)*

ಇ) *ಸರಬರಾಜುದಾರರು ಲ್ಯಾಬರೇಟರಿ ಅಧಿಕಾರಿಗಳ ಮೇಲೆ ಸರಬರಾಜು ಮಾಡಿದ ಸುಣ್ಣದಲ್ಲಿ ಸಿ.ಎ.ಓ.ನ್ನು ಹೆಚ್ಚು ಶೇಕಡಾವಾರು ತೋರಿಸುವಂತೆ ಒತ್ತಡ ತಂದಿರುವ ಬಗ್ಗೆ ದೂರುಗಳು ಬಂದಿವೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಕಂಪೆನಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆ?*

ಈ) *ಮೈಸೂರು ಕಾಗದದ ಕಾರ್ಖಾನೆಗೆ 1985ರಿಂದೀಚೆಗೆ ಸರಬರಾಜು ಮಾಡಿದ ವಿವಿಧ ದರ್ಜೆಯ ಸುಣ್ಣದ ಬಗ್ಗೆ ವಿವರ ಕೊಡುವುದು?*

(ಮಾಹೆವಾರು ಸಿ.ಎ.ಒ. ಶೇಕಡಾವಾರು 1985ರಿಂದೀಚೆಗೆ ವಿವರ ಕೊಡುವುದು)

ಊ) *ಗ್ರೀನ್ ಲಿಕ್ಕರನ್ನು ವೈಟ್ ಲಿಕ್ಕರನ್ನಾಗಿ ಪರಿವರ್ತಿಸಲು ಸುಟ್ಟ ಸುಣ್ಣವನ್ನು ಬಳಸಿಕೊಳ್ಳಲಾಗುತ್ತಿದೆಯೇ ಎಂಬುದು ನಿಜವೇ? ಹಾಗಿದ್ದಲ್ಲಿ ವೈಟ್ ಲಿಕ್ಕರ್ ಆಗಿ ಪರಿವರ್ತಿತವಾದ ಗ್ರೀನ್ ಲಿಕ್ಕರ್‌ನ ಪ್ರಮಾಣ ಎಷ್ಟು? ಇದಕ್ಕಾಗಿ ವ್ಯಯವಾದ ಸುಟ್ಟ ಸುಣ್ಣದ ಪ್ರಮಾಣ ಎಷ್ಟು? 1985ರಿಂದ ಮಾಹೆಯಾನ ಅಂಶಗಳನ್ನು ನೀಡುವುದು.*

ಋ) *ಸುಟ್ಟ ಸುಣ್ಣದ ಉತ್ಪಾದನೆಗಾಗಿ ಎಂ.ಪಿ.ಎಂ.ನಲ್ಲಿ ಸುಣ್ಣದ ಕುಲುಮೆಯನ್ನು ಸ್ಥಾಪಿಸಲಾಗಿದೆಯೇ ಕುಲುಮೆಯ ಸ್ಥಾಪಿತ ಸಾಮರ್ಥ್ಯ ಮತ್ತು 1985ರಿಂದೀಚೆಗೆ ಉತ್ಪಾದಿಸಲ್ಪಟ್ಟ ಸುಟ್ಟ ಸುಣ್ಣದ ಪ್ರಮಾಣವನ್ನು ವಿವರಿಸುವುದು.*

ಋ) *ಎಂ.ಪಿ.ಎಂ. ತನ್ನ ಬೇಡಿಕೆಯನ್ನು ತಾನೇ ಉತ್ಪಾದಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವಾಗ ಸುಟ್ಟ ಸುಣ್ಣವನ್ನು ಹೊರಗಿನ ಸರಬರಾಜುದಾರರಿಂದ ಪಡೆದುಕೊಳ್ಳುವ ಅವಶ್ಯಕತೆ ಎಲ್ಲಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಸುಟ್ಟ ಸುಣ್ಣವನ್ನು ಕೊಂಡುಕೊಳ್ಳಲು ಆಂಧ್ರಪ್ರದೇಶ, ತಮಿಳುನಾಡು, ಮತ್ತು ಕರ್ನಾಟಕವನ್ನು ಒಳಗೊಂಡಂತೆ ಪತ್ರಿಕಾ ಪ್ರಕಟಣೆಯ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು.

ಒಟ್ಟು ಟೆಂಡರ್‌ಗಳು - 36

ಪಿಡುಗುರಿಲ್ಲಾ (ಆಂಧ್ರ) - 24

ಡೋನ್ (ಆಂಧ್ರ) - 6

ಕರ್ನಾಟಕದಿಂದ - 6

ಆ) ಮೈಸೂರು ಕಾಗದದ ಕಾರ್ಖಾನೆಯ ಲ್ಯಾಬೊರೇಟರಿ ವರದಿಯ ಮೇರೆಗೆ ಸಿ.ಎ.ಒ. ಶೇಕಡಾವಾರನ್ನು ಅನುಸರಿಸಿ ಸುಣ್ಣವನ್ನು ಸರಬರಾಜು ಮಾಡಿದ 8 ದಿನಗಳೊಳಗಾಗಿ ಹಣವನ್ನು ಪಾವತಿ ಮಾಡಲು ಕರಾರು ವಿಧಿಸಿರುತ್ತದೆ.

ಇ) ಹೌದು ಸರಬರಾಜುದಾರರನ್ನು ಈ ಬಗ್ಗೆ ಎಚ್ಚರಿಸಲಾಗಿದೆ.

ಈ) ವಿವರಗಳನ್ನು ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.

ಉ) ಹೌದು. ವಿವರಗಳನ್ನು ಅನುಬಂಧ 2 ರಲ್ಲಿ ಲಗತ್ತಿಸಿದೆ.

ಊ) ಹೌದು. ಸುಟ್ಟ ಸುಣ್ಣದ ಕುಲುಮೆಯ ಸ್ಥಾಪಿತ ಸಾಮರ್ಥ್ಯವು ದಿನಂಪ್ರತಿ 1150 ಟನ್‌ಗಳಷ್ಟಿವೆ.

1985ರಿಂದ ಉತ್ಪಾದಿಸಲಾದ ಸುಟ್ಟ ಸುಣ್ಣದ ಪ್ರಮಾಣ:

ವರ್ಷ	ಪ್ರಮಾಣ(ಮೆಟ್ರಿಕ್ ಟನ್‌ಗಳಲ್ಲಿ)
1985-86	15178
1986-87	15215
1987-88	15349
1988-89	13701
1989-90	8535

ಋ) ಖರೀದಿಸುವ ದರಕ್ಕಿಂತ ಕಂಪೆನಿಯ ಕುಲುಮೆಯಲ್ಲಿ ತಯಾರಾಗುವ ಸುಟ್ಟ ಸುಣ್ಣದ ದರವು ಹೆಚ್ಚಾಗುತ್ತದೆ. ಆದ್ದರಿಂದ ಸುಟ್ಟ ಸುಣ್ಣವನ್ನು ಹೊರಗಡೆಯಿಂದ ಖರೀದಿಸಲಾಗುತ್ತಿದೆ.

8.3.1991

Monthwise average Free CaO. content in Purchased Burnt Lime from Jan. 1985 to Feb., 1991.

Year & Month	*1985*		*1986*	
	Burnt lime Avg. free CaO. %	*Shell lime Avg. free CaO. %*	*Burnt lime Avg. free CaO. %*	*Shell lime Avg. free CaO. %*
Jan	48.5	-	50.2	62.8
Feb.	50.4	-	-	-
March	45.35	-	-	50.0
April	57.06	-	53.5	59.7
May	47.94	52.96	44.1	57.8
June	25.6	51.1	51.5	53.2
July	37.5	52.00	-	54.9
Aug	46.75	62.35	57.1	56.6
Sept	52.75	66.39	60.0	56.1
Oct.,	50.1	63.75	49.6	58.0
Nov.	-	-	46.0	57.4
Dec.	56.94	60.5	51.3	61.25
	1987		1988	
Jan	55.3	48.4	-	57.0
Feb.	60.35	48.7	61.5	54.19
March	62.0	47.3	60.3	56.25
April	57.6	52.7	53.07	27.7
May	-	47.0	52.2	47.2
June	60.6	50.6	51.4	55.4
July	61.9	47.15	50.8	52.1
Aug	60.2	51.7	55.04	52.5

Sept	55.2	52.5	55.9	54.9
Oct.,	57.1	51.9	54.6	56.4
Nov.	57.8	57.9	55.4	56.6
Dec.	58.3	53.1	55.0	55.65
	1989		1990	
Jan	57.78	56.42	59.9	-
Feb.	62.1	56.5	60.6	-
March	62.8	56.85	60.1	-
April	59.9	57.1	59.2	-
May	63.1	-	54.3	-
June	57.8	-	51.1	-
July	61.8	55.8	52.0	-
Aug	60.1	-	53.8	-
Sept.	58.9	-	55.06	-
Oct.	57.6	-	56.65	-
Nov	55.85	-	58.4	-
Dec.	59.75	-	58.7	-
		1991		
Jan.	59.6	-		
Feb.	59.1	-		

ANNEXURE-II

	1985-86 Green Liquor	1985-86 White Liquor	1985-86 Burnt Lime	1986-87 Green Liquor	1986-897 White Liquor	1986-87 Burnt Lime	1987-88 Green Liquor	1987-88 White Liquor	1987-88 Burnt Lime
April	960	672	1118	736	515	844	971	680	856
May	1423	996	1297	1099	769	1351	1734	1214	1625
June	1401	981	1452	1490	1043	1360	987	691	921
July	1311	918	728	1554	1088	1231	1144	801	1050
Aug	1353	947	1103	1741	1219	1369	1557	1090	1434
Sept	1203	842	1040	1671	1170	1627	1214	850	1193
Oct	1254	878	926	1639	1147	1644	1199	839	1249
Nov	657	460	557	1184	829	935	629	440	417
Dec	686	480	481	1474	1032	1715	979	685	743
Jan	696	487	725	1279	895	1243	1104	773	1094
Feb	780	546	651	890	623	698	1213	849	1109
Mar	1287	901	968	1499	1049	917	1106	774	862
Total	13011	9108	11046	16256	11379	14934	13837	9686	12553

	1988-89 Green Liquor	1988-89 White Liquor	1988-89 Burnt Lime	1989-90 Green Liquor	1989-90 White Liquor	1989-90 Burnt Lime	1990-91 Green Liquor	1990-91 White Liquor	1990-91 Burnt Lime
April	1243	870	1134	1731	1212	1420	1160	812	896
May	899	629	790	1681	1177	1207	2230	1561	1754
June	1273	891	1002	1807	1265	1507	2176	1523	1703
July	1619	1133	1481	1941	1359	1465	2221	1555	1830
Aug	1476	1033	1469	1437	1006	1380	2410	1687	1777
Sept	673	471	344	1739	1217	1483	1991	1394	1639
Oct	1233	863	1256	1854	1298	1610	2374	1662	1790
Nov	1573	1101	1012	710	497	813	2109	1476	1400
Dec	1474	1032	1271	1331	932	1045	2257	1580	1712
Jan	1581	1107	1336	2010	1407	1702	2140	1498	1459
Feb	1751	1226	1247	1866	1306	1359	2010	1407	1364
Mar	1913	1339	1500	2040	1428	1807			
Total	16707	11695	13842	20149	14104	16778	23079	16155	17324

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ, ಈ ಪಟ್ಟಿಯಲ್ಲಿ ನನ್ನ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬಂದಿರುವುದಿಲ್ಲ.

ಅಧ್ಯಕ್ಷರು : ನಾನು ಕಳುಹಿಸಿಕೊಡುತ್ತೇನೆ.

ಜನ್ಮ ದಿನದ ಶುಭಾಶಯ

ಅಧ್ಯಕ್ಷರು : ಈ ದಿವಸ ಮಾನ್ಯ ಸದಸ್ಯರಾದ ಡಿ. ಹಲಗೇಗೌಡರ ಜನ್ಮದಿನವಾಗಿದೆ. ಅವರಿಗೆ ಎಲ್ಲ ಸದಸ್ಯರ ಪರವಾಗಿ ನಾನು ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಒಂದು ವಾರದಿಂದ ಮುಚ್ಚಿರುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕಳೆದ ಒಂದು ವಾರದಿಂದ ಮುಚ್ಚಿದ್ದಾರೆ. ಇವತ್ತು ಅಲ್ಲಿರತಕ್ಕಂಥ ವಿದ್ಯಾರ್ಥಿಗಳು ಮತ್ತು ಭೋದಕೇತರ, ಸಿಬ್ಬಂದಿ ವರ್ಗದವರು, ಕೆಲವು ಬೋಧಕವರ್ಗದವರು ನಮ್ಮನ್ನು ಭೇಟಿ ಮಾಡಿ ಮತ್ತೆ ವಿಶ್ವವಿದ್ಯಾನಿಲಯಕ್ಕೆ ವಾಪಸ್ ನಾವು ಹೋಗುವುದಿಲ್ಲ. ಅಲ್ಲಿ ಬಹಳ ತೀವ್ರವಾದ ಪರಿಸ್ಥಿತಿ ಉದ್ಭವವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇವೆ. ತಮ್ಮ ಮೂಲಕ ಅವರಲ್ಲಿ ವಿನಂತಿ ಕೋರಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಕಾರಣವೇನೆಂದರೆ ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮತ್ತೆ ಬೇರೆ ಬೇರೆ ಸಮಸ್ಯೆಗಳು ಉದ್ಭವವಾಗಬಹುದು, ಕಾನೂನು ಪರಿಸ್ಥಿತಿ ಉದ್ಭವವಾಗಬಹುದು. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಅರಿತುಕೊಂಡು ಅಲ್ಲಿನ ಉಪಕುಲಪತಿಗಳನ್ನು, ವಿದ್ಯಾರ್ಥಿ ಮುಖಂಡರನ್ನೂ ಮತ್ತು ಸಿಬ್ಬಂದಿ ವರ್ಗದವರನ್ನೂ ಕರೆಸಿ ಮಾತನಾಡಿ ಮಾನ್ಯ ಶಿಕ್ಷಣ ಮಂತ್ರಿಗಳು ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದಂಥ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಸುಮಾರು ಮೂರು ನಾಲ್ಕು ದಿವಸಗಳಿಂದ ಆ ಪ್ರದೇಶಕ್ಕೆ ಯಾರೂ ಹೋಗುವ ಪರಿಸ್ಥಿತಿ ಇಲ್ಲ. ವಿದ್ಯಾರ್ಥಿಗಳಿಗೂ ಮತ್ತು ಆಡಳಿತ ವರ್ಗದವರಿಗೂ ಬಹಳ ತೀವ್ರವಾದ ಘರ್ಷಣೆ ಉಂಟಾಗಿ ಅಂತ್ಯಕ್ಕೆ ತಲುಪುತ್ತಿದೆ. ಸರ್ಕಾರ ಅವರನ್ನು ಕರೆದು ಮಾತುಕತೆ ನಡೆಸುವ ಪ್ರಯತ್ನ ಮಾಡಿಲ್ಲ. ಅವರದು ತಪ್ಪಾಗಿದೆಯೋ ಅಥವಾ ಇವರದು ತಪ್ಪಾಗಿದೆಯೇ ಅವರನ್ನು ಕರೆಸಿ ಮಾತುಕತೆ ಆಡಿ ಏನಾದರೂ ಪರಿಹಾರವನ್ನು ಕಂಡುಹಿಡಿಯತಕ್ಕಂಥ ಪ್ರಯತ್ನ ಇದುವರೆಗೆ ಮಾಡಲಿಲ್ಲ. ನಿನ್ನೆ ಮೊನ್ನೆ ಅವರ ಭೂತಗಳನ್ನು ಸುಟ್ಟು ಹಾಕಿರುತ್ತಾರೆ. ರಸ್ತೆಯಲ್ಲಿ ಗದ್ದಲಗಳು ನಡೆಯುತ್ತಿವೆ. ಕಾಲೇಜುಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇಡೀ ಬೆಂಗಳೂರಿನಲ್ಲಿರುವ ಎಲ್ಲ ಕಾಲೇಜುಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿಗೆ ತಲುಪುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸಕಾಲದಲ್ಲಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಕರೆದು ಅವರ ಜೊತೆಯಲ್ಲಿ ಮಾತುಕತೆಗಳನ್ನು ಆಡಿ, ವಿದ್ಯಾರ್ಥಿಗಳ ಜೊತೆಯಲ್ಲಿ ಮಾತನಾಡಿ ಅವರ ಬೇಡಿಕೆ ಏನಿದೆ ಮತ್ತು ಭೋದಕರ ಬೇಡಿಕೆ ಏನಿದೆ ಅದನ್ನು ಸರಿಪಡಿಸತಕ್ಕಂಥದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ಬಗ್ಗೆ ತಾವು ಗಮನಹರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.